# ಆಹಾ ಬಣ್ಣ; ಹೇಗಿದೆ ಅಣ್ಣ?



■ ರಾಘು

ನರೆಗೂದಲನ್ನು ಮರೆಮಾಚಿ ಕಪ್ಪು ಬಣ್ಣ ಹಚ್ಚುವುದು ಮಾಮೂಲು. ಆದರಿಂದ ತಮ್ಮ ಯೌವನದ ಉತ್ಸಾಹವನ್ನು ಹೊರಹೊಮ್ಮಿಸಬಹುದು. ಇದು ಆಧುನಿಕ ಜೀವನಶೈಲಿಯ ಫ್ಯಾಷನಿಗೂ ಹೇಳಿ ಮಾಡಿಸಿದಂತೆ ಆಗುತ್ತದೆ. ಈ ಬಣ್ಣದ ಫ್ಯಾಷನ್ ಮೋಡಿ ಬಿಳಿಗೂದಲನ್ನು ಮುಚ್ಚಿ ಹರೆಯ ತೋರಿಸುವುದಕ್ಕೆ ಸೀಮಿತವಲ್ಲ. ಫ್ಯಾಷನ್ ಯುಗದಲ್ಲಿ ಸಮಯ, ಸಂದರ್ಭಕ್ಕೆ ವಿನ್ಯಾಸ ಬದಲಾಗುತ್ತದೆ. ಕೂದಲು ಕಪ್ಪೇ ಇರಲಿ ಬಿಳಿಯೇ ಇರಲಿ ಅವುಗಳಿಗೆ ನಾನಾ ಸ್ವರೂಪ ನೀಡಿ ಆಕರ್ಷಣೆ ತುಂಬುವುದು ಯುವಕರ ಖಯಾಲಿ.

ಅಭಿರುಚಿ ಭಿನ್ನ; ಬಣ್ಣವೂ ವಿಭಿನ್ನ. ಒಬ್ಬೊಬ್ಬರಿಗೆ ಒಂದೊಂದು ಇಷ್ಟ. ಅವರ ಬಯಕೆಯಂತೆ ಆಯ್ಕೆ ಕೂಡ ಇದೆ. ಬಣ್ಣದ ಒಲವು ಮತ್ತು ಆಕರ್ಷಣೆಗೆ ಯಾವ ಬಣ್ಣ ಆಯ್ಕೆ ಮಾಡಿಕೊಂಡರೂ ಅದು ಹೊಂದಿಕೆ ಆಗುತ್ತದೆಯೇ ಎಂದು ಯೋಚಿಸುವುದು ಸೂಕ್ತ. ತನ್ನ ತ್ವಚೆಯ ಬಣ್ಣ, ಸೌಂದರ್ಯ, ತಲೆಗೂದಲ ಬಣ್ಣ ಅಲಂಕಾರ ದೈಹಿಕ ಚಹರೆಯ ಆಕರ್ಷಣೆಯನ್ನೂ ಹೆಚ್ಚಿಸುವಂತೆ ಇರಬೇಕು. ಈ ಬಯಕೆ ಲಿಂಗಾತೀತವಾದುದು. ನರೆಗೂದಲಿಗೆ ಹಚ್ಚುವ ಬಣ್ಣದಂತೆಯೇ ವೈವಿಧ್ಯ ವಿನ್ಯಾಸ ಮತ್ತು ವರ್ಣದಿಂದ ಅಲಂಕರಿಸಬಹುದು.

## ಹೇಗಿರಬೇಕು ಬಣ್ಣ?

ಈಗ ಬೇಸಿಗೆಯ ಕಾಲ. ಅಲಂಕಾರದ ಜೊತೆ ಹವಾಮಾನಕ್ಕೆ ಹಾಯಾಗಿ ಇರುವಂತೆ ಕೇಶಾಲಂಕಾರ ಇರಬೇಕು. ಹಾಗಾಗಿ ಚಿಕ್ಕದಾಗಿ ಕಟ್ ಮಾಡಿಸಿ ಕಂದು ಬಣ್ಣವನ್ನು ಹಚ್ಚಿದರೆ ಆಕರ್ಷಕವಾಗಿ ಕಾಣಿಸುತ್ತದೆ. ಇಲ್ಲವೇ ಮಿಂಚಿನ ಹೊಳಪನ್ನು ಹೊರಹೊಮ್ಮಿಸಲು ಮೆಹೆಂದಿಯನ್ನೂ ಹಚ್ಚಬಹುದು. ಸ್ಪೈಕ್ ಹೇರ್ ವಿನ್ಯಾಸದಲ್ಲಿ ಕೂದಲು ಬಾಚುವವರಿಗೂ ಕಂದು ಬಣ್ಣ ಸೊಗಸಾಗಿರುತ್ತದೆ.

ಗುಂಗುರು ಕೂದಲಿನವರು ಸಾಮಾನ್ಯವಾಗಿ ಗಾಢ ಕಪ್ಪುಬಣ್ಣವನ್ನು ಇಷ್ಟಪಡುತ್ತಾರೆ. ಗುಂಗುರು ಕೂದಲಿಗೆ ಕಪ್ಪು ಚಂದ ಅನ್ನಿಸುತ್ತದೆ. ಅದೇ ಆಗಬೇಕು ಅಂತಲೂ ಇಲ್ಲ. ಇಷ್ಟದಂತೆ ಹೇರ್ ಕಲರಿಂಗ್ ಮಾಡಿದರೂ ತ್ವಚೆಗೆ ಹೊಂದುತ್ತದೆಯೇ ಎಂದು ನೋಡಬೇಕು.

ತಮಗೆ ಸೂಕ್ತ ಆಗುವ ಬಣ್ಣವನ್ನೇ ಆಯ್ಕೆ ಮಾಡಿಕೊಂಡರೆ ಚೆನ್ನಾಗಿರುತ್ತದೆ. ಬಣ್ಣ ಬದಲಿಸಲು ಹತ್ತಾರು ಆಯ್ಕೆಗಳು ಇರುವಾಗ ಒಂದೇ ಬಣ್ಣಕ್ಕೆ ಏಕೆ ಜೋತು ಬೀಳಬೇಕು ಎನ್ನುವ ಯುವಕರೂ ಇದ್ದಾರೆ. ಅವರು ಬೇಕೆನಿಸಿದಾಗೆಲ್ಲ, ಬೇಕಾದ ರೀತಿಯ ರೂಪವನ್ನು ತಮ್ಮ ಕೂದಲಿಗೆ ನೀಡುತ್ತಾರೆ.

ಭಾರತೀಯ ಹುಡುಗರು ಸಾಮಾನ್ಯವಾಗಿ ಚಾಕೊಲೇಟ್, ಕೆಂಪು ಮತ್ತು ಹಳದಿ ಬಣ್ಣವನ್ನು ಹೆಚ್ಚು ಬಳಸುತ್ತಾರೆ. ಕಲರ್ ಮಾಡಿಸಿದ ಕೂದಲಿಗೆ ರಿಂಗ್ ಸ್ಟೈಲ್ ಮಾಡಿಸಿದರೂ ಅದರ ಹೊಳಪು ಹೆಚ್ಚುತ್ತದೆ. ಮದುವೆ, ಕಾಲೇಜು ಕಾರ್ಯಕ್ರಮ, ಶುಭ ಸಮಾರಂಭ, ಪಾರ್ಟಿ ದೃಷ್ಟಿಯಿಂದ ಕಲರ್ ಮಾಡಿಸುವಾಗ ಅಂದು ಹಾಕುವ ಡ್ರೆಸ್‌ಗೆ ತಕ್ಕಂತೆ ಹೇರ್ ಕಲರ್ ಮಾಡಿಸುವುದು ಇನ್ನೂ ಚೆನ್ನಾಗಿರುತ್ತದೆ.

ಸಾಮಾನ್ಯವಾಗಿ ಹುಡುಗರು ನೀಲಿ ಬಣ್ಣವನ್ನು ಹೆಚ್ಚು ಇಷ್ಟಪಡುತ್ತಾರೆ. ಅನಾದಿಕಾಲದಿಂದ ಈ ಬಣ್ಣದ ಮೋಹ ಮನುಷ್ಯನ ಬೆನ್ನು ಹತ್ತಿದೆ. ಇವತ್ತಿನ ಕೇಶಾಲಂಕಾರದ ದುನಿಯಾದಲ್ಲಿ ಅದರಲ್ಲಿ ಹತ್ತಾರು ವೈವಿಧ್ಯಗಳಿವೆ. ಹಾಗಾಗಿ ಕಾರ್ಯಕ್ರಮ ಯಾವುದು ಮತ್ತು ಧರಿಸುವ ಬಟ್ಟೆ ಆಧರಿಸಿ ಅದನ್ನು ನಿರ್ಧರಿಸುವುದು ಜಾಣತನ.

ಕೆಂಪು, ಹಳದಿ, ನೀಲಿ ಇವೇ ಮೂಲ ಬಣ್ಣವಾದರೂ ಅವುಗಳಲ್ಲಿಯೇ 20ಕ್ಕೂ ರೂಪಾಂತರವನ್ನು ಮಾಡಿದ್ದಾರೆ. ಕಂದು, ನೀಲಿಯ ಜೊತೆ ಬೂದು ಬಣ್ಣವನ್ನೂ ಇಷ್ಟಪಡುವ ಹುಡುಗರು ಇದ್ದಾರೆ. ಕನ್ನಡ ಸೀಮೆಯ ಹುಡುಗರಿಗೆ ಕಂದು ಬಣ್ಣ ಚಂದ ಕಾಣಿಸುತ್ತದೆ.

ಹಾಗೆಂದು ಗಾಢ ಕಂದು ಢಾಳಾಗುತ್ತದೆ. ತಿಳಿಕಂದು ನಿಮ್ಮಿಷ್ಟದ ಫ್ಯಾಷನ್‌ನನ್ನು ಆಕರ್ಷಣೀಯಗೊಳಿಸುತ್ತದೆ.

ಬಣ್ಣದಿಂದ ವಯಸ್ಸಾದವರೂ ಚಿಕ್ಕವರಂತೆ ಕಾಣುತ್ತಾರೆ. ಇನ್ನು ಸುಂದರವಾಗಿ ಕಾಣಬಯಸುವ ಎಲ್ಲ ವಯಸ್ಸಿನ ಹೆಂಗಳೆಯರಿಗೂ ಇದು ಹೊಸ ಲುಕ್ ನೀಡುವುದಂತೂ ಗ್ಯಾರಂಟಿ.

ಈಗ ಹೆಚ್ಚಾಗಿ ನರೆಕೂದಲಿನ ಸಮಸ್ಯೆಗೆ ಪರಿಹಾರವಾಗಿ ಹೇರ್ ಕಲರ್ ಸಿಗುತ್ತಿವೆ. ಕಾಲೇಜು ಹುಡುಗಿಯರು ತಮ್ಮ ಉದ್ದವಾದ ಜಡೆ ಕತ್ತರಿಸಿ ತಮಗೊಪ್ಪುವ ಹೇರ್ ಸ್ಟೈಲ್ ಜೊತೆಗೆ ಕಲರ್‌ಗಳ ಜೋಡಣೆ ಮಾಡುವುದೂ ಪರಿಪಾಟವಾಗಿದೆ.

ಮಾರುಕಟ್ಟೆಯಲ್ಲಿ ಸಿಗುವ ಹೇರ್ ಕಲರ್‌ಗಳಲ್ಲಿ ಎರಡು ಪ್ರಕಾರಗಳಿವೆ. ಒಂದು ತಾತ್ಕಾಲಿಕ ಹೇರ್ ಕಲರ್, ಇನ್ನೊಂದು ಶಾಶ್ವತ ಹೇರ್‌ಕಲರ್. ತಾತ್ಕಾಲಿಕವಾಗಿ ಈ ಹೇರ್ ಕಲರ್ ಬಳಸುವುದು ಉತ್ತಮವೆನಿಸಿದರೂ ದೀರ್ಘಕಾಲದ ಬಳಕೆ ಹಲವು ಅಡ್ಡ ಪರಿಣಾಮಗಳನ್ನು ಬೀರಬಹುದು. ಈ ಬಗ್ಗೆ ಎಚ್ಚರ ವಹಿಸುವುದು ಅತ್ಯಗತ್ಯ.

ಚರ್ಮಕ್ಕೂ ಹಾನಿಯಾಗಬಹುದು. ಕೆಲವು ಹೇರ್ ಕಲರ್‌ಗಳಿಂದ ಚರ್ಮಕ್ಕೂ ಹಾನಿಯಾಗುವ ಸಂಭವ ಇದೆ. ಹೀಗಾಗಿ ಎಚ್ಚರವಹಿಸುವುದು ಒಳಿತು. ಚರ್ಮ ವ್ಯಾಧಿ ಕೆಲವೊಮ್ಮೆ ಕ್ಯಾನ್ಸರ್‌ಕಾರಕವೂ ಆಗಬಹುದು. ತಲೆಹೊಟ್ಟು, ಕಡಿತವೂ ಉಂಟಾಗಬಹುದು.

## ಹೇರ್ ಕಲರ್ ಬಳಕೆಗೂ ಮುನ್ನ

- ಯಾವಾಗಲೂ ಉತ್ತಮ ಬ್ರಾಂಡ್‌ನ ಹೇರ್ ಕಲರ್ ಅನ್ನೇ ಉಪಯೋಗಿಸಬೇಕು.
- ಹೇರ್ ಕಲರ್ ಬಳಸುವ ಮುಂಚೆ ಅದು ನಿಮ್ಮ ಚರ್ಮಕ್ಕೆ ಹೊಂದಿಕೆಯಾಗುತ್ತದೆಯೋ ಇಲ್ಲವೋ ಗಮನಿಸಬೇಕು.
- ಹೇರ್ ಕಲರ್ ಬಳಸಿದ ನಂತರ ಹೆಚ್ಚು ಹೊತ್ತು ಬಿಸಿಲಿನಲ್ಲಿ ಓಡಾಡಬಾರದು. ಇದರಿಂದ ಕೂದಲಿನ ಬಣ್ಣ ಹಾಳಾಗುವ ಸಾಧ್ಯತೆ ಇದೆ.
- ಮೊದಲ ಸಲ ಕೂದಲಿಗೆ ಬಣ್ಣ ಹಚ್ಚುವಾಗ ಪಾರ್ಲರ್‌ನಲ್ಲಿ ಕಲರಿಂಗ್ ಮಾಡಿಸುವುದು ಒಳ್ಳೆಯದು.
- ಕೂದಲಿಗೆ ಕಲರಿಂಗ್ ಮಾಡಿಸುವ ಮೊದಲು ಮತ್ತು ನಂತರ ಕೂದಲಿಗೆ ಕಂಡೀಷನರ್ ಹಚ್ಚುವುದನ್ನು ಮರೆಯಬಾರದು.
- ಮೊದಲ ಸಲ ಕೂದಲಿಗೆ ಬಣ್ಣ ಹಚ್ಚುವಾಗ ಸ್ವಲ್ಪ ಕೂದಲಿಗೆ ಮಾತ್ರ ಬಣ್ಣ ಹಚ್ಚಿ ಟೆಸ್ಟ್ ಮಾಡಿದ ನಂತರವೇ ಇನ್ನುಳಿದ ಕೂದಲಿಗೆ ಬಣ್ಣ ಹಚ್ಚಬೇಕು.
- ಕೂದಲಿನ ಕಲರ್ ನಿಮ್ಮ ಮುಖಕ್ಕೆ ಹೊಂದಿಕೆಯಾಗುತ್ತದೋ ಇಲ್ಲವೋ ನೋಡಿ ಕಲರ್ ಮಾಡಿಸಬೇಕು. ಇಲ್ಲದಿದ್ದರೆ ಎಲ್ಲರ ಮುಂದೆ ಮುಜುಗರ ಪಡಬೇಕಾಗುತ್ತದೆ.
- ಕಪ್ಪಗಿರುವವರು ಕೂದಲಿಗೆ ರೆಡ್ ಕಲರ್ ಮಾಡಿಸುವುದು ಉತ್ತಮ, ಬೆಳ್ಳಗಿದ್ದವರಿಗೆ ಯಾವ ಬಣ್ಣದ ಕೂದಲೂ ಚೆನ್ನಾಗಿ ಒಪ್ಪುತ್ತದೆ. ■